ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು**

**ಸಂಖ್ಯೆ: ಇ-ಆಡಳಿತ : ಸಿ.ಸೇ.ಮಾಹಿತಿ: 04/2018-19** **ದಿನಾಂಕ: 29.03.2019**

**ತುರ್ತು ಕ್ರಮಕ್ಕಾಗಿ**

## ಸುತ್ತೋಲೆ

ವಿಷಯ:- ಪದವೀಧರ ಪ್ರಾಥಮಿಕ ಶಿಕ್ಷಕರ ಸೇವಾಮಾಹಿತಿಯನ್ನು ಶಿಕ್ಷಕರ ಮಾಹಿತಿ ತಂತ್ರಾಂಶದಲ್ಲಿ ಅಳವಡಿಸುವ ಕಾರ್ಯ ಪೂರ್ಣಗೊಳ್ಳದಿರುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸುತ್ತೋಲೆ **ಸಂಖ್ಯೆ: ಇ-ಆಡಳಿತ : ಸಿ.ಸೇ.ಮಾಹಿತಿ: 03/ 2018-19 ದಿನಾಂಕ: 14.02.2019**

---------

ಮೇಲ್ಕಂಡ ಉಲ್ಲೇಖದ ಸುತ್ತೋಲೆಯನ್ವಯ ಹೊಸದಾಗಿ ನೇಮಕ ಹೊಂದಿದ ಪದವೀಧರ ಪ್ರಾಥಮಿಕ ಶಿಕ್ಷಕರ (GPT) ಸೇವಾ ಮಾಹಿತಿಯನ್ನು ದಿನಾಂಕ:-25-02-2019 ರೊಳಗೆ ಶಿಕ್ಷಕರ ಸೇವಾ ಮಾಹಿತಿ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಲಾಗಿತ್ತು. ಆದರೆ **ದಿನಾಂಕ:-29-03-2019** ರವರೆಗೆ **507 ಪದವೀಧರ ಪ್ರಾಥಮಿಕ ಶಿಕ್ಷಕರ ಮಾಹಿತಿ**ಯು ಮಾತ್ರ ತಂತ್ರಾಂಶದಲ್ಲಿ ಲಭ್ಯವಿರುತ್ತದೆ, 2015-16ರ ಅಧಿಸೂಚನೆಯನ್ವಯ **5032** ಮತ್ತು 2017-18 ರ ಅಧಿಸೂಚನೆಯನ್ವಯ **3346** ಪದವೀಧರ ಪ್ರಾಥಮಿಕ ಶಿಕ್ಷಕರ (GPT) ನೇಮಕಾತಿಯಾಗಿರುತ್ತದೆ.

ಶಿಕ್ಷಕರ ಮಾಹಿತಿಯನ್ನು ನಿಗದಿತ ಅವಧಿಯಲ್ಲಿ ತಂತ್ರಾಂಶದಲ್ಲಿ ಅಳವಡಿಸದೇ ಅಥವಾ ಇಂದೀಕರಿಸದೇ ಇದ್ದಲ್ಲಿ ಕೇಂದ್ರ ಕಛೇರಿಯಲ್ಲಿ ವಿವಿಧ ಉದ್ದೇಶಗಳಿಗೆ ಜಿಲ್ಲಾವಾರು ಶಿಕ್ಷಕರ ನಿಖರವಾದ ಮಾಹಿತಿ ಪಡೆಯಲು ಸಾಧ್ಯವಾಗುವುದಿಲ್ಲ. ಈ ಸುತ್ತೋಲೆಯೊಂದಿಗೆ ನೀಡಿರುವ **ಅನುಬಂಧ-1** ರಲ್ಲಿ 2015-16 ಮತ್ತು 2017-18 ರ ಅಧಿಸೂಚನೆಗಳನ್ವಯ ನೇಮಕವಾದ ಜಿಲ್ಲಾವಾರು ಪದವೀಧರ ಪ್ರಾಥಮಿಕ ಶಿಕ್ಷಕರ ಸಂಖ್ಯೆ ಮತ್ತು ಟಿಡಿಎಸ್ ನಲ್ಲಿ ಅಳವಡಿಸಲಾದ ಪ.ಪ್ರಾ.ಶಿಕ್ಷಕರ ಸಂಖ್ಯೆಯನ್ನು ನೀಡಲಾಗಿದೆ. ಎಲ್ಲಾ ಶಿಕ್ಷಕರ ಮಾಹಿತಿಯನ್ನು ಮತ್ತೊಮ್ಮೆ ಪರಿಶೀಲಿಸಿ, ಬಾಕಿ ಉಳಿದಿರುವ ಶಿಕ್ಷಕರ ಮಾಹಿತಿಯನ್ನು ದಿನಾಂಕ:-05-04-2019ರೊಳಗೆ ಕಡ್ಡಾಯವಾಗಿ ಟಿಡಿಎಸ್ ನಲ್ಲಿ ಅಳವಡಿಸಲು ಕ್ಷೇತ್ರಶಿಕ್ಷಣಾಧಿಕಾರಿಗಳು ಕ್ರಮ ಕೈಗೊಳ್ಳಲು ಸೂಚಿಸಿದೆ.

ದಿನಾಂಕ:-05-04-2019 ರಂದು ಸಂಜೆ 5-30 ರೊಳಗೆ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಇವರು ತಮ್ಮ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ , ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ದೃಢೀಕರಣ ಪತ್ರವನ್ನು ಆಯುಕ್ತರ ಕಛೇರಿಯ ಇ-ಆಡಳಿತ ವಿಭಾಗಕ್ಕೆ ಕಡ್ಡಾಯವಾಗಿ ಸಲ್ಲಿಸಲು ತಿಳಿಸಿದೆ.

ಶಿಕ್ಷಕರ ಮಾಹಿತಿ ಅಳವಡಿಕೆ ಮತ್ತು ಇಂದೀಕರಿಸುವ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆಗಳಿದ್ದಲ್ಲಿ ವಿವರವನ್ನು **sadpiegov@gmail.com** ಗೆ ಈ-ಮೇಲ್ ಮೂಲಕ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಈ ಮೂಲಕ ತಿಳಿಸಿದೆ.

ಜಂಟಿ ನಿರ್ದೇಶಕರು (ಆಡಳಿತ)
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ,**

1. ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು( ಪ್ರಾಥಮಿಕ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

**ಪ್ರತಿಯನ್ನು**

1. **ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.**

# ಅನುಬಂಧ-1

| ಕ್ರ.ಸಂ. | ಜಿಲ್ಲೆ | 2015-16 ರ ಅಧಿಸೂಚನೆಯನ್ವಯ ನೇಮಕಾತಿಯಾದ GPT ಶಿಕ್ಷಕರ ಸಂಖ್ಯೆ | 2017-18 ರ ಅಧಿಸೂಚನೆಯನ್ವಯ ನೇಮಕಾತಿಯಾದ GPT ಶಿಕ್ಷಕರ ಸಂಖ್ಯೆ | ಒಟ್ಟು GPT ಸಂಖ್ಯೆ | 2015-16 ರ ಅಧಿಸೂಚನೆಯನ್ವಯ ನೇಮಕಾತಿಯಾಗಿದ್ದು TDS ನಲ್ಲಿ ಮಾಹಿತಿ ಅಳವಡಿಸಿದ GPT ಶಿಕ್ಷಕರ ಸಂಖ್ಯೆ | 2017-18 ರ ಅಧಿಸೂಚನೆಯನ್ವಯ ನೇಮಕಾತಿಯಾಗಿದ್ದು TDS ನಲ್ಲಿ ಮಾಹಿತಿ ಅಳವಡಿಸಿದ GPT ಶಿಕ್ಷಕರ ಸಂಖ್ಯೆ | 6 ಮತ್ತು 7 ಅನ್ನು ಹೊರತುಪಡಿಸಿ GPT ಪದನಾಮದಡಿ ದಾಖಲಿಸಿರುವ ಶಿಕ್ಷಕರ ಸಂಖ್ಯೆ | TDS ನಲ್ಲಿ ದಾಖಲಿಸಿರುವ ಒಟ್ಟು GPT ಸಂಖ್ಯೆ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಬಾಗಲಕೋಟೆ | 238 | 140 | **378** | 49 | 34 | 3 | **86** |
| 2 | ಬೆಂಗಳೂರು ಉತ್ತರ | 45 | 40 | **85** | 0 | 3 | | **3** |
| 3 | ಬೆಂಗಳೂರು ದಕ್ಷಿಣ | 117 | 33 | **150** | 29 | 9 | 1 | **39** |
| 4 | ಬೆಂಗಳೂರು ಗ್ರಾಮಾಂತರ | 65 | 5 | **70** | 0 | 0 | | **0** |
| 5 | ಬೆಳಗಾವಿ | 142 | 113 | **255** | 1 | 0 | 1 | **2** |
| 6 | ಬಳ್ಳಾರಿ | 331 | 283 | **614** | 3 | 0 | 0 | **3** |
| 7 | ಬೀದರ್ | 199 | 192 | **391** | 3 | 1 | 0 | **4** |
| 8 | ವಿಜಯಪುರ | 453 | 158 | **611** | 63 | 14 | 1 | **78** |
| 9 | ಚಾಮರಾಜನಗರ | 115 | 36 | **151** | 0 | 8 | 0 | **8** |
| 10 | ಚಿಕ್ಕೋಡಿ | 284 | 311 | **595** | 18 | 0 | 0 | **18** |
| 11 | ಚಿಕ್ಕಮಗಳೂರು | 48 | 0 | **48** | 1 | 0 | 0 | **1** |
| 12 | ಚಿಕ್ಕಬಳ್ಳಾಪುರ | 106 | 50 | **156** | 0 | 0 | 0 | **0** |
| 13 | ಚಿತ್ರದುರ್ಗ | 100 | 118 | **218** | 0 | 3 | 0 | **3** |
| 14 | ದಕ್ಷಿಣ ಕನ್ನಡ | 205 | 75 | **280** | 17 | 6 | 0 | **23** |
| 15 | ದಾವಣಗೆರೆ | 118 | 0 | **118** | 13 | 0 | 0 | **13** |
| 16 | ಧಾರವಾಡ | 228 | 54 | **282** | 2 | 5 | 0 | **7** |
| 17 | ಗದಗ | 123 | 48 | **171** | 5 | 0 | 0 | **5** |
| 18 | ಕಲ್ಬುರ್ಗಿ | 326 | 370 | **696** | 3 | 0 | 0 | **3** |
| 19 | ಹಾಸನ | 52 | 0 | **52** | 17 | 0 | 2 | **19** |
| 20 | ಹಾವೇರಿ | 207 | 119 | **326** | 7 | 5 | 0 | **12** |
| 21 | ಕೊಡಗು | 20 | 27 | **47** | 0 | 1 | 0 | **1** |
| 22 | ಕೋಲಾರ | 99 | 26 | **125** | 0 | 3 | 0 | **3** |
| 23 | ಕೊಪ್ಪಳ | 214 | 242 | **456** | 0 | 1 | 0 | **1** |
| 24 | ಮಂಡ್ಯ | 42 | 124 | **166** | 0 | 8 | 0 | **8** |
| 25 | ಮಧುಗಿರಿ | 63 | 58 | **121** | 0 | 0 | 0 | **0** |
| 26 | ಮೈಸೂರು | 243 | 100 | **343** | 25 | 50 | 2 | **77** |
| 27 | ರಾಮನಗರ | 70 | 33 | **103** | 8 | 2 | 1 | **11** |
| 28 | ರಾಯಚೂರು | 178 | 267 | **445** | 0 | 0 | 0 | **0** |
| 29 | ಶಿವಮೊಗ್ಗ | 132 | 61 | **193** | 7 | 7 | 2 | **16** |
| 30 | ಶಿರಸಿ | 170 | 71 | **241** | 32 | 0 | 1 | **33** |
| 31 | ತುಮಕೂರು | 54 | 17 | **71** | 0 | 0 | 0 | **0** |
| 32 | ಉಡುಪಿ | 69 | 32 | **101** | 12 | 9 | 0 | **21** |
| 33 | ಉತ್ತರ ಕನ್ನಡ | 15 | 27 | **42** | 0 | 0 | 0 | **0** |
| 34 | ಯಾದಗಿರಿ | 161 | 116 | **277** | 0 | 0 | 0 | **0** |
| | ಒಟ್ಟು | **5032** | **3346** | **8378** | **321** | **176** | **10** | **507** |